ಅದನ್ನು ಎಕ್ಸಂಪ್ಟ್ ಮಾಡಬೇಕೋ ಅಥವಾ ಅದಕ್ಕೆ ಒಂದು ಪಿಕ್ಸ್‌ಡ್ ಅಮೌಂಟ್‌ನ್ನು ಗೊತ್ತುಪಡಿಸಬೇಕೋ ಎಂಬುದನ್ನು ನೋಡುತ್ತೇನೆ. ಅಗತ್ಯವಾದರೆ ಅದರ ಬಗ್ಗೆ ತಿದ್ದುಪಡಿಯನ್ನು ತರಬೇಕಾಗಿ ಬರುತ್ತದೆ. ಆದುದರಿಂದ ಈ ಬಗ್ಗೆ ಎಕ್ಸಾಮಿನ್ ಮಾಡಿಸಿ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ನೋಡುತ್ತೇನೆ. ಇನ್ನು ನಾನು ರಿಜಿಸ್ಟ್ರೇಶನ್‌ಗೆ ಇರತಕ್ಕ ಮೆತೆಡ್‌ನ್ನು ಏನು ಅಡಾಪ್ಟ್ ಮಾಡಿದ್ದೇವೆ ಅದು ವೈಜ್ಞಾನಿಕವಾಗಿದೆ ಎಂದು ಹೇಳಿದೆನೇ ಹೊರತು ನಿಮ್ಮ ಥಿಯರಿ ಪ್ರಕಾರ ಪ್ರೊಡಕ್ಷನ್ ಮೇಲೆ ಇದೆಯೋ, ಇನ್ನಾವುದೇ ವಿಚಾರಗಳ ಮೇಲೆ ಇದೆಯೋ ಎಂದು ಅದನ್ನು ನಾನು ಹೇಳುತ್ತಾ ಇಲ್ಲ. ಇದು ಸಾವಿರಾರು ವರ್ಷಗಳಿಂದ, ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಆದರೆ ರಿಜಿಸ್ಟ್ರೇಷನ್‌ಗೆ ಒಂದು ಮೆಥಡ್‌ನ್ನು ಅಡಾಪ್ಟ್ ಮಾಡಬೇಕು.

ಪ್ರೊ ಎಂ.ಡಿ. ನಂಜುಂಡಸ್ವಾಮಿ: ಇದು ಸಾವಿರಾರು ವರ್ಷಗಳಿಂದ ಬಂದಿದೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ನಮ್ಮ ದೇಶಕ್ಕೆ ಯಾರೋ ಬಂದು ಇಲ್ಲಿ ನಮ್ಮ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮೈಸೂರು ಮಹಾರಾಜರ ಕಾಲದಲ್ಲಿಯೂ ಇತ್ತು.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ಅದು ಬ್ರಿಟಿಷರ ಕಾಲದಿಂದ ಬಂದಿದೆ. Even during Reg vedic days land was not considered as property at all. Even the Kings were prohibited from owning the land. That is our tradition.

ಈ ಸ್ಟಾಂಪ್ ಆಕ್ಟ್ ಟ್ರಿಡಿಷನ್ ಬ್ರಿಟಿಷರು ತಂದಿದ್ದು. ಇವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಇದು ಬರೇ ವಾಟಣಿ ಪ್ರಶ್ನೆ ಅಲ್ಲ. ನಾನು ಸಾಲಕ್ಕೆ ಹೋದರೆ ನಾನು ಎಷ್ಟು ಹಣವನ್ನು ತೆಗೆದುಕೊಳ್ಳುತ್ತೇನೆಯೋ ಅದಕ್ಕೆ 10ಪರ್‌ಸೆಂಟ್‌ನಷ್ಟು ಸ್ಟ್ಯಾಂಪ್ ಶುಲ್ಕವನ್ನು ಕೊಡಿ ಎಂದರೆ ನಾನು ಏನು ಮಾಡಬೇಕು. ಇದು ಯಾವ ವೈಜ್ಞಾನಿಕ ಪದ್ಧತಿ ಸ್ವಾಮಿ? ಸಾಲಕ್ಕೆ ಹೋಗುವವರಿಗೂ ಇದು ಅನ್ಯಯವಾಗಬೇಕೆ? ಆದುದರಿಂದ ದಯವಿಟ್ಟು ಇದಕ್ಕೆ ಒಂದು ತಿದ್ದುಪಡಿ ಮಾಡುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸದ್ಯಕ್ಕೆ ಒಂದು ವಿಚಾರವನ್ನು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಆ ವಿಚಾರವನ್ನು ಮುಂದೆ ನೋಡೋಣ.

ರಾಜ್ಯದಲ್ಲಿ ಜೈನ ದೇವಾಲಯಗಳ ಅಭಿವೃದ್ಧಿ

2232 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರ ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

ಅ) ರಾಜ್ಯದಲ್ಲಿ ಜೈನಕಾಶಿ ಎಂದು ಪರಿಗಣಿಸಲ್ಪಟ್ಟಿರುವ ಮೂಡಬಿದ್ರೆಯ ಹಲವಾರು ಜೈನ ಮಂದಿರುಗಳನ್ನು ಅಭಿವೃದ್ಧಿಗೆ ಸರ್ಕಾರ ಏನಾದರೂ ಆಲೋಚನೆಯನ್ನು ಕೈಗೊಂಡಿರುವುದೇ?

ಆ) ಹಲವಾರು ಜೈನ ಮಂದಿರಗಳನ್ನು ಯೋಗ್ಯ ಸ್ಥಿತಿಯಲ್ಲಿಡಲು ಸರ್ಕಾರ ಧನ ಸಹಾಯ ಮಾಡುವುದೇ?

ಇ) ಭಾರತದ ಅನೇಕ ಯಾತ್ರಿಕರನ್ನು ಆಕರ್ಷಣೆ ಮಾಡುತ್ತಿರುವ ಸಾವಿರ ಕಂಬದ ಬಸದಿಯನ್ನು ಮತ್ತಷ್ಟು ಸುಂದರಗೊಳಿಸಲು ಸರ್ಕಾರ ಯೋಜನೆಯನ್ನೇನಾದರೂ ತಯಾರಿಸಿದೆಯೆ?

ಶ್ರೀ ರಾಜಾ ಅಮರೇಶ್ವರ ನಾಯಕ್ (ಧಾರ್ಮಿಕ ದತ್ತಿ, ರಾಜ್ಯ ಸಚಿವರು):

ಅ) ಇಲ್ಲ

ಅ) ಅಂತಹ ಮನವಿಗಳು ಬಂದಲ್ಲಿ ಸರಕಾರವು ಪರಿಶೀಲಿಸಲಾಗುವುದು.

ಇ) ಇಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ : ನಮ್ಮ ಮೂಡಬಿದರೆಯಲ್ಲಿ ಅನೇಕ ಜೈನ ಮಂದಿರಗಳು ಇವೆ. ಜಿನಸ್ವಾಮಿ ಯಾವ ಅಹಿಂಸೆ, ಅಸ್ತೇಯ ಅಪರಿಗ್ರಹ, ಅಸತ್ಯತ್ಯಾಗ ಮಹಾನ್ ತತ್ವಗಳನ್ನು ಅನುಷ್ಠಾನವನ್ನು ಈ ಜೈನ ಮಂದಿರಗಳ ಮೂಲಕ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾಡಿದ್ದಾರೆ. ಇದನ್ನು ದಕ್ಷಿಣ ಭಾರತದ ಪವಿತ್ರವಾದ ಜೈನಕಾಶಿ ಎಂದು ಕೂಡ ಗೌರವಿಸುತ್ತಾರೆ. ಉತ್ತರ ಭಾರತದ ಅನೇಕ ಯಾತ್ರಿಕರು ಮೂಡುಬಿದರೆಗೆ ಬರುತ್ತಾ ಇರುತ್ತಾರೆ. ಆದರೆ ಈ ಜೈನಮಂದಿರಗಳ ಸ್ಥಿತಿ ಚಿಂತಾಜನಕವಾಗಿದೆ. ಇವು ಬಹಳ ಹಿಂದಿನ ಕಾಲದಲ್ಲಿ ಕಲ್ಲಿನಿಂದ ಕಟ್ಟಿದಂಥ ಸುಂದರ ಮಂದಿರಗಳು. ಉದಾಹರಣೆಗೆ ಹೇಳುವುದಾದರೆ, ಸಾವಿರ ಕಂಬದ ಬಸದಿ ಎಂದು ನಾಮಾಂಕಿತ ಹೊಂದಿದ ಪವಿತ್ರ ಜಿನ ಮಂದಿರದ ಮೇಲ್ಛಾವಣಿಯಿಂದ ನೀರು ಒಳಬದಿಗೆ ಸುರಿಯುತ್ತಾ ಇದೆ. ಊರಿನವರಿಂದ ಅದರ ಜೀರ್ಣೋದ್ಧಾರ ಮಾಡುವುದು ಕಷ್ಟ ಸಾಧ್ಯದ ಕೆಲಸ. ಆದುದರಿಂದ ಜೀರ್ಣೋದ್ಧಾರದ ಕೆಲಸಕ್ಕಾಗಿ ಅಲ್ಲಿಯ ಜನರು ವಿಷೇಶತಃ ಸರಕಾರದ ವತಿಯಿಂದ ಸಹಾಯವನ್ನು ಕೇಳುತ್ತಾ ಇದ್ದಾರೆ. ನಮ್ಮ ಸರಕಾರದವರು ಹಿಂದು ದೇವಾಲಯಗಳಿಗೆ ಸಹಾಯವನ್ನು ಕೊಡುತ್ತಾ ಇದ್ದಾರೆ. ಹಾಗೆಯೇ ಜಿನದೇವಾಲಯಗಳಿಗೂ ಸಹಾಯವನ್ನು ಮಾಡಬೇಕೆಂದು ಆ ಊರಿನ ಜನರು ಕೇಳುತ್ತಿದ್ದಾರೆ. ಈ ಕುರಿತು ಸರಕಾರದವರ ಧೋರಣೆ ಏನು ಎಂಬುದನ್ನು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ರಾಜಾ ಅಮರೀಶ್ ನಾಯಕ್ : ಹಿಂದೂ ಮತೀಯ ಧಾರ್ಮಿಕ ಸಂಸ್ಥೆಗಳು, ಹುಬ್ಬಳ್ಳಿ ಕಾಯಿದೆಯ 1950ರ ವ್ಯಾಪ್ತಿಯಲ್ಲಿ ಜೈನ ಮಂದಿರಗಳಿಗೂ ಸಹ ಧನಸಹಾಯವನ್ನು ನೀಡುತ್ತಿದ್ದೇವೆ. ಅವರು ಧನಸಹಾಯಕ್ಕಾಗಿ ಅಂದಾಜು ಪಟ್ಟಿ, ನಕ್ಷೆ ಮತ್ತಿತರ ಪ್ರಸ್ತಾವಗಳನ್ನು ಏನು ಸಲ್ಲಿಸಬೇಕೋ ಅವನ್ನು ಸಲ್ಲಿಸಿದರೆ ಧನ ಸಹಾಯ ನೀಡಬಹುದು.

ಶ್ರೀ ಕೆ. ಸೋಮಪ್ಪ ಸುವರ್ಣ : ಈಗಾಗಲೇ ಪ್ರವಾಸೋದ್ಯಮ ಇಲಾಖೆಯವರು ಈ ಸಾವಿರಕಂಬ ಬಸದಿಗೆ ಫ್ಲಡ್ ಲೈಟನ್ನು ಒದಗಿಸಿ ಅದರ ಸೌಂದರ್ಯವನ್ನು ಬಾಕಿ ಜನಗಳು ನೋಡುವ ಹಾಗೆ ಮಾಡಿದ್ದಾರೆ. ಆದರೆ ಹೊಟ್ಟೆಗೆ ಹಿಟ್ಟಿಲ್ಲದೆ ಜುಟ್ಟಿಗೆ ಮಲ್ಲಿಗೆಯೆಂಬಂತಾಗಿದೆ. ದೇವಸ್ಥಾನ, ಜಿನ ಮಂದಿರ ನೋಡುತ್ತಿದೆ. ಆದ್ದರಿಂದ ಸರ್ಕಾರ ಇದಕ್ಕೆ ಹೆಚ್ಚಿನ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಕೋರುತ್ತೇನೆ.

ಶ್ರೀ ರಾಜಾ ಅಮರೇಶ್ ನಾಯಕ್ : ಸರ್ಕಾರ ಪ್ರತ್ಯೇಕವಾದ ಯೋಜನೆ ರೂಪಿಸಬಹುದಾಗಿದೆ. ಈ ಬಗ್ಗೆ ತಾವು ಪ್ರಸ್ತಾವ ಸಲ್ಲಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷರು: ಭೈರೇಗೌಡರೇ, ನಿಮ್ಮ 436ನೇ ಪ್ರಶ್ನೆಯನ್ನು ಇಂಡಸ್ಟ್ರೀಸ್ ಇಲಾಖೆಗೆ ವರ್ಗಾಯಿಸಿದ್ದಾರೆ, ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಸಿ. ಭೈರೇಗೌಡ: ನೆಕ್ಸ್ಟ್ ರೌಂಡ್‌ನಲ್ಲಾದರೂ ಆದ್ಯತೆ ಮೇಲೆ ಈ ಪ್ರಶ್ನೆಗೆ ಉತ್ತರ ತರಿಸಿಕೊಡುವ ವ್ಯವಸ್ಥೆಮಾಡಿಕೊಡಬೇಕು.

ಉಪಾಧ್ಯಕ್ಷರು: ಆಯಿತು.